ಮೂಲಕ ತಾವ್ಪೋನಂತಹ ಒಬ್ಬ ಕವಿಯನ್ನ, ಅಲ್ಲನಮನಂತಹ ಒಬ್ಬ ಕವಿಯನ್ನ, ಬೇಂದ್ರೆಯಂತ ಒಬ್ಬ ಕವಿಯನ್ನು ನಿಮ್ಮ ಸಾಲುಗಳ ಮೂಲಕ ಮತ್ತೆ ಸೃಜಿಸೋದಿದೆಯಲ್ಲ ಅದು ಒಂಥರ ಬೇರೆ. ಈ ಒಂದು ಪುಟ್ಟದಾದ ಊರಲ್ಲಿರುವಾಗ ಸಣ್ಣ ಸಣ್ಣ ಸಂಗತಿಗಳು ಸಣ್ಣ ಸಣ್ಣ ಘಟನೆಗಳು ನಿಮ್ಮ ಹತ್ತಿರ ಬಂದು ಯಾವುದೋ ಹೊತ್ತಲ್ಲಿ ಮಾತನಾಡುವ ಒಬ್ಬ ಕುಡುಕನ ಮಾತುಗಳು ಅಥವಾ ಮಗುವಿನ ತೊದಲು ನುಡಿಗಳು ಅಥವಾ ದೊಡ್ಡ ದಾರ್ಶನಿಕನ ಮಾತುಗಳೆಲ್ಲಾ ಒಂದು ಸಣ್ಣ ಊರಲ್ಲಿ ಬೇರೆ ರೀತಿಯಲ್ಲಿ ನಡೆಯುತ್ತಿರುತ್ತವೆ. ಈ ತರಹ ಒಂದು ಸಣ್ಣ ಊರಿನಲ್ಲಿ ಬದುಕುವುದು ಒಬ್ಬ ಕವಿಗೆ ಎಷ್ಟರ ಮಟ್ಟಿಗೆ ಮುಖ್ಯ?

ಬಹಳ ಮುಖ್ಯ ರಶೀದ್. ಸಣ್ಣದಿದೆಯಲ್ಲಾ ಅದೇ ನಿಜವಾದದ್ದು. ಒಂದು ಮರ ಇರುತ್ತದೆ. ಅಲ್ಲೂ ಒಂದು ಪುಟ್ಟ ನೆರಳಿರುತ್ತದೆ. ಓ! ಇದು ಬಹಳ ಚೆನ್ನಾಗಿರುವ ನೆರಳು ಕೊಡುವ ಮರ ಅಂತ ಅದನ್ನ ನಮ್ಮೂರಿಂದ ಕಿತ್ತುಕೊಂಡುಬಂದು ನಿಮ್ಮ ಮೈಸೂರಿಗೆ ಹಾಕೋಕ್ಕಾಗಲ್ಲ. ಅದು ಅಲ್ಲೇ ಇರುತ್ತದೆ. ಬೇಕಾದರೆ ನೀವು ಹೋಗಿ ಅಲ್ಲೇ ನಿಂತುಕೊಳ್ಳಬೇಕಷ್ಟೇ. ಸಣ್ಣದಾಗಿರೋದು ಮತ್ತು ನಿರ್ದಿಷ್ಟವಾಗಿರೋದು ಮನಸ್ಸಿಗೆ ಬಹಳ ಮುಖ್ಯವಾದುದು. ಏಕೆಂದರೆ, ಅನುಭವ ಎಂದರೇನೇ ಅದು ಬಹಳ ನಿರ್ದಿಷ್ಟವಾದದ್ದು. ಸಾರ್ವತ್ರಿಕ ಅನುಭವ ಎಂಬುದು ಇರೋದಿಲ್ಲ.

ನಾನು ಲೋಕವನ್ನು ಪ್ರೀತಿಸುತ್ತೇನೆ ಅಂದರೆ ಆ ಮಾತಿಗೆ ಅರ್ಥವಿಲ್ಲ. ಯಾರೋ ಇಬ್ಬರು ಸ್ನೇಹಿತರನ್ನು ಪ್ರೀತಿಸುತ್ತೇನೆ ಎಂದರೆ ಅದು ಪ್ರೀತಿ – ದ್ವೇಷ ಎರಡನ್ನು ಒಳಗೊಂಡ ಒಂದು ಸಂಬಂಧ ಅದು. ಆ ನಿರ್ದಿಷ್ಟತೆ ಇದೆಯಲ್ಲ ಅದು ಬರುವುದೇನೇ ಸಣ್ಣದರಲ್ಲಿ ನಂಬಿಕೆ ಇಟ್ಟಿರುವಾಗ. ದೊಡ್ಡದರಲ್ಲಿ ಬದುಕುವುದು ಅಂತ ಇಲ್ಲ. ಅದರ ಬಗ್ಗೆ ನನಗೆ ಯಾವತ್ತೂ ನಂಬಿಕೆ ಇಲ್ಲ.

- ಯಾರನ್ನೋ ಬೈಟು ಟೀ ಕುಡಿಯೋಣ ಅಂತ ಹೇಳಿ ಕರೆದು ಅವರ ಮುಂದೆ ನಿಮ್ಮ ಕವಿತೆಗಳನ್ನು ಓದುತ್ತೀರಿ. ಇಲ್ಲವೇ, ಅವರು ಅವರ ಕವಿತೆಗಳನ್ನು ನಿಮ್ಮ ಮುಂದೆ ಓದುತ್ತಾರೆ. ಎಲ್ಲೋ ಅಪರಾತ್ರಿಯಲ್ಲಿ, ಎಲ್ಲೋ ನಡುರಸ್ತೆಯಲ್ಲಿ ಕವಿತೆಗಳ ವಾಚನ ನಡೆಯುತ್ತದೆ. ಬೇರೆ ತರಹವೇ ನೀವು ಕವಿತೆಗಳ ಬಗ್ಗೆ ಯೋಚನೆ ಮಾಡುತ್ತೀರಿ. ಕವಿತೆ ಬರೆಯುವ ಕ್ರಿಯೆ ಕೂಡ ಬೇರೆ ರೀತಿ ನಡೆಯುತ್ತದೆ. ಎಲ್ಲೋ ಒಂದು ಕಡೆ ನೀವು ಬರೆದುಕೊಂಡಿದ್ದೀರಿ, 'ಕವಿತೆ ನಾನು ಬರೆಯುವುದಲ್ಲ, ಅದು ಭಾಷೆ ನನ್ನಿಂದ ಬರೆಸಿಕೊಳ್ಳುವುದು; ಕವಿತೆ ಅಂದರೆ ನನ್ನದಲ್ಲ, ಅದು ಈ ಭಾಷೆಗೆ, ಈ ಲೋಕಕ್ಕೆ ಸೇರಿದ್ದು' ಅಂತ. ಇದು ಏನು ಅಂತ ವಿವರಿಸಿ.

ಕವಿತೆ ಒಂದು ಭಾಷೆಯ ಅಭಿವ್ಯಕ್ತಿ. ಕನ್ನಡಕ್ಕೆ ಎಷ್ಟು ಕವಿತೆ ಬೇಕು? ಅದಕ್ಕೆ ಎಷ್ಟು ಕವಿತೆಯ ಹಂಬಲವಿದೆಯೋ ಅಷ್ಟು ಕವಿತೆಯನ್ನು ಅದು ಸೃಷ್ಟಿಸುತ್ತದೆ. ಅದು ಭಾಷೆಯದೇ ಆದ ಹಂಬಲ. ನಾನು ನನ್ನ ಸಂವೇದನೆ ವಿಶಿಷ್ಟವಾಗಿದೆ ಅಂತ ಅಂದುಕೊಂಡರೆ ಅದು ಒಂದು ಮಾರ್ಗ ಅಷ್ಟೇ. ಅದೊಂದು ನೋಡುವ ಕ್ರಮ. ಆದರೆ, ಅದು ನಂತರ ಅಂತಿಮವಾಗಿ ಮುಟ್ಟುವುದು ದೊಡ್ಡದನ್ನು. ಏಕೆಂದರೆ ಕವಿತೆ ಎನ್ನುವುದು ಒಂದು ಅನುಭವದ ವಿವರಣೆಯಲ್ಲ; ಅನುಭವದ ಅಭಿವ್ಯಕ್ತಿ ಅದು. ಅಭಿವ್ಯಕ್ತಿ ಯಾವುದರದು ಎಂದರೆ ಭಾಷೆಯದು. ನಾನು ಹೇಗೆ ಅದನ್ನ ಕಣ್ಣಿನ ಮುಂದೆ ತಂದುಕೊಳ್ಳುತ್ತೇನೆ ಅಂದರೆ ರಶೀದ್, ಒಂದು ವೃತ್ತ, ಅದರಲ್ಲಿ ಒಂದು ಕೇಂದ್ರವಿದೆ. ಆ ವೃತ್ತದ ಪರಿಧಿಯಲ್ಲಿ ಅಸಂಖ್ಯಾತ ಬಿಂದುಗಳಿರುತ್ತವೆ. ನಾವೆಲ್ಲ ವ್ಯಕ್ತಿಗಳಾಗಿ ಅಸಂಖ್ಯಾತ ಬಿಂದುಗಳ ತರಹ ಇರುತ್ತೇವೆ. ನನ್ನ ಬದುಕೇ ಬೇರೆ, ನನ್ನ ಆಸೆನೇ ಬೇರೆ, ನನ್ನ ಕನಸೇ ಬೇರೆ, ನನ್ನ